
ಸೇರುವುದಿಲ್ಲ. ಟ್ರಂಪ್ ವಿರೋಧವಿರಬಹುದು. ಆದರೆ, ಈ ದಶಲಕ್ಷ ಮಹಿಳೆಯರಲ್ಲಿ ಬಹುತೇಕ ಮಂದಿ ಸವರ್ಣೀಯರು. ಟ್ರಂಪ್‌ಗೆ ಓಟು ಹಾಕಿದವರಲ್ಲಿ ಬಹುತೇಕ ಸವರ್ಣೀಯ ಮಹಿಳೆಯರೇ ಎಂದು ಮಾಹಿತಿ ಹೇಳುತ್ತಿದೆ. ಅಲ್ಪಸಂಖ್ಯಾತರ ಹೋರಾಟದಲ್ಲಿ ಸವರ್ಣೀಯ ಮಹಿಳೆಯರ ವರ್ಣಭೇದವನ್ನೂ ಆಕೆ ವಿರೋಧಿಸುತ್ತಿದ್ದಾಳೆ. ಈ ಕಾಲಕ್ಕೆ ಕೇವಲ ತಾನು ಒಪ್ಪುವ ಟ್ರಂಪ್ ವಿರೋಧ ಎನ್ನುವ ಏಕಮೇವ ಕಾರಣ ಹಿಡಿದು ಈ ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದು ಸರಿಯಲ್ಲ ಅಂತ ಲಿಂಡಾ ಹೇಳುತ್ತಾಳೆ. ಶತ್ರುವಿನ ಶತ್ರು ಮಿತ್ರರಾಗಬೇಕೆಂದೇನೂ ಇಲ್ಲ. ಮತಭೇದ ಇರುವಲ್ಲಿ ವಿಚಾರವಾದವನ್ನು ಬಲಿಕೊಟ್ಟು ಸಣ್ಣ ರಾಜಿಗಳನ್ನು ಮಾಡಿಕೊಂಡರೆ ತಮ್ಮ ಉದ್ದೇಶದ ಜೊತೆ ರಾಜಿ ಮಾಡಿಕೊಂಡಂತಾಗುತ್ತದೆ ಎಂದು ಆಕೆ ಹೇಳುತ್ತಾಳೆ. ನಮ್ಮ ವಿಚಾರಗಳನ್ನು ಜನ ಒಪ್ಪುವಂತೆ ಒತ್ತಾಯ ಮಾಡಬೇಕಾದರೆ, ಅಲ್ಲಿ ನಾವೇ ರಾಜಿಯಾಗುತ್ತಿರುವಂತೆ ಕಾಣುವುದು ರಾಜಕೀಯ ಸಮೀಪ ದರ್ಶನವಾಗುತ್ತದೆ. ರಾಜಿಯಿಲ್ಲದೇ ರಾಜಕೀಯ ನಡೆಸಿದಾಗ ಮಾತ್ರ ಒತ್ತಾಯ ಮಾಡಲು, ಅದರಿಂದ ಪರಿವರ್ತನೆಯತ್ತ ಸಾಗಲು ಸಾಧ್ಯ ಎನ್ನುವುದನ್ನು ಲಿಂಡಾ ತನ್ನ ನಡಾವಳಿಯ ಮೂಲಕ ನಿರೂಪಿಸುತ್ತಾಳೆ.

ಒತ್ತಾಯದ ಮತ್ತೊಂದು ವಿಧಾನದಲ್ಲಿ ಲೊರೆಟ್ಟಾ ರಾಸ್ ಭಿನ್ನವಾದ ಪ್ರಶ್ನೆಯನ್ನೇ ಕೇಳುತ್ತಾಳೆ. ಜಗತ್ತನ್ನು ಬದಲಾಯಿಸಲು ಹೊರಟಿರುವ ನಾವು ಅದಕ್ಕಾಗಿ ಉಪಯೋಗಿಸುವ ವಿಧಿವಿಧಾನಗಳೇನು? ಲೈಂಗಿಕ ದೌರ್ಜನ್ಯದ ವಿಷಯಕ್ಕೆ ಬಂದಾಗ ಬಲಾತ್ಕಾರಕ್ಕೆ ಒಳಗಾದ ಮಹಿಳೆಯರ ಜೊತೆ ಕೆಲಸ ಮಾಡಿ ಅವರ ಜೀವನವನ್ನು ಹಸನು ಮಾಡುವ ಕೆಲಸವನ್ನು ಅನೇಕ ಸಮಾಜ ಸೇವಾ ಸಂಸ್ಥೆಗಳು ನಿರ್ವಹಿಸುತ್ತಿವೆ. ಆದರೆ, ಬಲಾತ್ಕಾರಿಗಳ ಮನೋವ್ಯಾಪಾರವನ್ನು ಅರಿತು – ಅವರುಗಳೊಂದಿಗೆ ಕಲೆತು, ಅವರುಗಳನ್ನು ಪರಿವರ್ತಿಸುವುದು ಸಾಧ್ಯವೇ? ಅಥವಾ ಬಲಾತ್ಕಾರಿಗಳನ್ನು ಬಂಧಿಸಿ ಶಿಕ್ಷಿಸಿ ದಂಡಿಸುವುದೇ ಏಕಮಾತ್ರ ಮಾರ್ಗವೇ? ಈ ಪ್ರಶ್ನೆಯನ್ನು ಲೊರೆಟ್ಟಾ ಕೇಳುತ್ತಾಳೆ. ಈ ವಿಚಾರಕ್ಕೆ ಮೂಲ ಪ್ರೇರಣೆ ವಿಲಿಯಂ ಫುಲರ್ ಎನ್ನುವ ಬಲಾತ್ಕಾರಿಯು ಜೈಲಿನಿಂದ ಬರೆದ




ಪತ್ರವಾಗುತ್ತದೆ. “ಹೊರಗಿದ್ದಾಗ ಮಹಿಳೆಯರನ್ನು ರೇಪ್ ಮಾಡುತ್ತಿದ್ದೆ. ಈಗ ಕಾರಾಗೃಹದಲ್ಲಿ ಪುರುಷರನ್ನು ರೇಪ್ ಮಾಡುತ್ತಿದ್ದೇನೆ. ಇದನ್ನು ತಪ್ಪಿಸಲು ಏನಾದರೂ ಮಾರ್ಗವಿದೆಯೇ?” ಈ ಪ್ರಶ್ನೆಯನ್ನು ಅವನು ಕೇಳಿದಾಗ, ಸಮಸ್ಯೆಯನ್ನು ಭಿನ್ನ ರೀತಿಯಲ್ಲಿ ನೋಡಬಹುದು ಎಂದು ಲೊರೆಟ್ಟಾಗೆ ಅನ್ನಿಸುತ್ತದೆ. ಕೈದಿಗಳ ಜೊತೆ ಕೂಡಿ ಸ್ತ್ರೀವಾದಿ ಸಾಹಿತ್ಯದ ಸಾಮೂಹಿಕ ಓದು ಮತ್ತು ಅಭ್ಯಾಸವನ್ನು ಜೈಲಿನಲ್ಲಿ ಪ್ರಾರಂಭಿಸುತ್ತಾರೆ. ಒಂದು ಸಮಸ್ಯೆ, ಮತ್ತದರ ಪರಿಹಾರ ಮಾರ್ಗ ಎಷ್ಟು ಭಿನ್ನವಾಗಿರಬಹುದು, ಅದರ ಜೊತೆ ಏಗುವಾಗ ನಮಗೆ ಪೂರ್ವಾಗ್ರಹಗಳು ಹೇಗೆ ಕೆಲಸ ಮಾಡಬಹುದು, ಅದನ್ನು ನೀಗಿಸಿಕೊಳ್ಳುವ ದಾರಿ ಇರಬಹುದಾ ಎನ್ನುವುದನ್ನು ಆಕೆ ಪರಿಶೀಲಿಸುತ್ತಾಳೆ. ಅನವಶ್ಯಕ ಗರ್ಭಧಾರಣೆಯನ್ನು ತೆಗೆಸಲು ಬರುವ ಕಪ್ಪು ಮಹಿಳೆಯರನ್ನು ಬಿಳಿ ಡಾಕ್ಟರುಗಳು “ಬೇಜವಾಬ್ದಾರಿ” ಹೆಂಗಸರೆಂದು ಕರೆದರೆ ಅಲ್ಲೂ ಪೂರ್ವಗ್ರಹವಿರಬಹುದೆಂದು ಲೊರೆಟ್ಟಾಗೆ ಅನ್ನಿಸುತ್ತದೆ. ಆ ಮಹಿಳೆಯರು ಗರ್ಭನಿರೋಧಕ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಏನಿರಬಹುದು ಎನ್ನುವುದನ್ನು ಪರಿಶೀಲಿಸಬೇಕು ಎನ್ನುವ ವಿಚಾರವನ್ನು